Ex.P 32/2024
PW-01

<u>ದಿನಾಂಕಃ 07-01-2026.</u>

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ ಡಿಕ್ರಿದಾರರ ಪರ ಶ್ರೀ RND ಮಾನ್ಯ ವಕೀಲರಿಂದಃ**

ನಾನು B.Sc ಅಂತಿಮ ಸೇಮಸ್ಟರಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನನ್ನ ತಮ್ಮ ಪ್ಯಾರಾ ಮೇಡಿಕಲ್ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ 3 ನೇ ತಮ್ಮ ಅಮರೇಶ ಇವರು LLB ಪದವಿಯನ್ನು ಮಾಡುತ್ತಿದ್ದಾರೆ. ನನ್ನ ವಿದ್ಯಾಭ್ಯಾಸವನ್ನು ದೇವದುರ್ಗ, ರಾಯಚೂರು ಹಾಗೂ ಶಾಹಾಪೂರಿನಲ್ಲಿ ಮಾಡಿರುತ್ತೇನೆ. ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ guardianship ಬಗ್ಗೆ ನನ್ನ ತಂದೆಯವರು ಹೆಸರು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ.ನಾನು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾಗ ನನ್ನ ತಂದೆ ತಾಯಿ ಹಾಗೂ ನಾವು ಅವರ ಮಕ್ಕಳು ಒಟ್ಟಿಗೆ ವಾಸ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ನಾನು ದೇವದುರ್ಗ, ರಾಯಚೂರು ಹಾಗೂ ಶಹಾಪೂರಿನಲ್ಲಿ ರೂಮನ್ನು ಮಾಡಿಕೊಂಡು ವಾಸ ಮಾಡುತ್ತಿದ್ದೆ. ನನ್ನ ತಂದೆ ಗುರುಬಸಪ್ಪಗೌಡ ಇವರು ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಅದೇ ರೀತಿಯಾಗಿ ಅವರು ಯಾವುದೇ ವ್ಯವಹಾರವನ್ನು ಹಾಗೂ ಗುತ್ತಿಗೆದಾರ ಕೆಲಸವನ್ನು ಮಾಡುತ್ತಿರಲಿಲ್ಲ ಎಂದರೆ ಸರಿ. ನಮ್ಮ ತಂದೆಯವರು ಒಕ್ಕಲುತನದಿಂದ ಬಂದತಹ ಆದಾಯದ ಮೇಲೆ ಜೀವನ ನಡೆಸುತ್ತಿದ್ದರು ಎಂದರೆ ಸರಿ.

2. ನಮ್ಮ ಮನೆತನಕ್ಕೆ ಒಟ್ಟು 6 ಎಕರೆ 8 ಗುಂಟೆ ಜಮೀನು ಹೊರತುಪಡಿಸಿದರೆ ಬೇರೆ ಜಮೀನು ಇರುವುದಿಲ್ಲ ಎಂದರೆ ಸರಿ. ನನ್ನ ಹಾಗೂ ನಮ್ಮ ತಮ್ಮಂದಿರ ಶಾಲಾ ಹಾಗೂ ಕಾಲೇಜು ವೆಚ್ಚವನ್ನು ಹಾಗೂ ರೂಮಗಳ ವೆಚ್ಚವನ್ನು ನಮ್ಮ ತಂದೆಯವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆ

ತಾಯಿಯ ತಂದೆ ತಾಯಿಯವರು ತೀರಿಕೊಂಡು ಬಹಳ ವರ್ಷವಾಗಿರುತ್ತವೆ ಎಂದರೆ ಸರಿ. ನನ್ನ ತಾಯಿಯ ತಾಯಿ ಸರಸ್ವತಿ ಇವರು ತೀರಿಕೊಂಡಾಗ ನನ್ನ ತಾಯಿಯ ಅಕ್ಕ ತಂಗಿಯರು ಸದರಿ ಸರಸ್ವತಿ ಇವರ ಮುಖವನ್ನು ನನ್ನ ತಾಯಿಗೆ ನೋಡಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ತಮ್ಮಂದಿರು ಹಾಗೂ ನನ್ನ ತಾಯಿ ನಮ್ಮ ಅಜ್ಜಿ ತೀರಿಕೊಂಡಾಗ ಹೋಗಿರುತ್ತೇವೆ. ನನ್ನ ಸದರಿ ಅಜ್ಜಿ ಸರಸ್ವತಿ ಇವರು ತೀರಿಕೊಂಡು ಈಗ 1 ವರ್ಷ ಆಗಿರುತ್ತದೆ.

3. ಸಾಕ್ಷಿಗೆ ಈಗ ನಿಮ್ಮ ತಂದೆ ತೀರಿಕೊಳ್ಳುವ ಮುಂಚಿತವಾಗಿ 2-3 ವರ್ಷಗಳಿಂದ ಉಷಾರಿರಲಿಲ್ಲ ಎಂದು ಹೇಳಿದಕ್ಕೆ ಸಾಕ್ಷಿ 1 ವರ್ಷ ಮಾತ್ರ ಎಂದು ಹೇಳುತ್ತಾರೆ. ನನ್ನ ತಂದೆಗೆ ಕುಡಿತದ ಚಟವಿತ್ತು. ನನ್ನ ತಂದೆಯವರು ಮೊದಲಿನಿಂದಲೂ ಮದ್ಯಪಾನ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರು ಪ್ರತಿನಿತ್ಯ ರೂ.100/- ಗಳಷ್ಟು ಮದ್ಯಪಾನವನ್ನು ಸೇವನೆ ಮಾಡುತ್ತಿದ್ದರು. ಸದರಿ ಆರು ಎಕರೆ ಎಂಟು ಗುಂಟೆ ಜಮೀನು ನೀರಾವರಿ ಆಗಿರುವುದಿಲ್ಲ. ಸದರಿ ಜಮೀನಿನಲ್ಲಿ ವರ್ಷಕ್ಕೆ ಕೇವಲ ಒಂದು ಬೆಳೆಯನ್ನು ಮಾತ್ರ ಬೆಳೆಯಲಾಗುತ್ತದೆ ಎಂದರೆ ಸರಿ. ನಮ್ಮ ತಂದೆಯವರು ಯಾವುದೇ ಸಾಲವನ್ನು ಮಾಡಿಕೊಂಡಿರುವುದಿಲ್ಲ. ನಮ್ಮ ತಂದೆಯವರಿಗೆ ಸದರಿ ಒಕ್ಕಲುತನದಿಂದ ಪ್ರತಿ ವರ್ಷ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು, ನನ್ನ ತಾಯಿ ಹಾಗೂ ನನ್ನ ತಮ್ಮಂದಿರು ಕೋರ್ಟಿನ ಹಿಂದುಗಡೆ ಮನೆ ಮಾಡಿಕೊಂಡು ವಾಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ತಮ್ಮಂದಿರು ಒಟ್ಟಿಗೆ ವಾಸ ಮಾಡುತ್ತೇವೆ ಹಾಗೂ ನನ್ನ ತಾಯಿ ಬೇರೆ ವಾಸ ಮಾಡುತ್ತಾರೆ. ಸುಮಾರು 10 ವರ್ಷಗಳಿಂದ ಈ ರೀತಿಯಾಗಿ ನಾವುಗಳು ಬೇರೆ ಬೇರೆಯಾಗಿ ವಾಸ ಮಾಡುದ್ದೇವೆ ನನ್ನ ತಂದೆಯವರು ತೀರಿಕೊಂಡು ಈಗ 10 ವರ್ಷಗಳಾಗಿರುತ್ತವೆ. ನಮ್ಮ ತಂದೆಯವರು ತೀರಿಕೊಂಡಾಗ ನಾನು ಹಾಗೂ

ನಿತಿನ್ ಕುಮಾರು ಇವರು 4 ನೇ ತರಗತಿಯಲ್ಲಿ ಹಾಗೂ ನನ್ನ ಇನ್ನೊಬ್ಬ ತಮ್ಮ ಅಮರೇಶ 2 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇವು. ನಮ್ಮ ತಂದೆಯವರು ತೀರಿಕೊಂಡ ನಂತರವೂ ಕುಡಾ ನಮ್ಮ ಶಾಲಾ ದಾಖಲೆಗಳಲ್ಲಿ guardian ಎಂದು ನಮ್ಮ ತಂದೆಯವರು ಹೆಸರನ್ನೆ ನಮೂದು ಮಾಡಿರುತ್ತೇವೆ. ಶಹಾಪೂರ, ದೇವದುರ್ಗ ಹಾಗೂ ರಾಯಚೂರಿನಲ್ಲಿ ನಾನು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾಗ ಪ್ರತಿ ತಿಂಗಳು ನನ್ನ ಶಾಲಾ ಖರ್ಚು ರೂ-15000 ರಿಂದ 20000 ಇತ್ತು ಎಂದರೆ ಸರಿ. ನಮ್ಮ ಸದರಿ ಶಾಲಾ ಖರ್ಚನ್ನು ನಮ್ಮ ಅತ್ತೆಯವರಾದ ಶ್ರೀಮತಿ ಚೆನ್ನಬಸ್ಸಮ್ಮ ಇವರು ಕೊಡುತ್ತಿದ್ದರು. ನನ್ನ ಸದರಿ ಅತ್ತೆಯವರು ನಂದೇಳ್ಳಿ ಗ್ರಾಮ ಶಹಾಪೂರ ತಾಲೂಕಿನಲ್ಲಿ ವಾಸ ಮಾಡುತ್ತಿದ್ದಾರೆ. ನನ್ನ ಸದರಿ ಅತ್ತೆಯವರ ಗಂಡ ಹೊಲಗಳನ್ನು ಹೊಂದಿದ್ದರು.

4. ನನ್ನ ತಾಯಿಯವರು ಸದರಿ ಜಮೀನನ್ನು ನಮ್ಮ ಊರಿನವರಿಗೆ ರೂ.2,00,000/- ಗಾದಂತೆ ಲೀಜಿಗೆ ಕೊಡುತ್ತಿದ್ದರು. ಸದರಿ ಲೀಜನ್ನು ತೆಗೆದುಕೊಂಡವರು  ಎಕರೆಗೆ ರೂ.5000/- ನ್ನು ಕೊಡುತ್ತಿದ್ದರು. ಪ್ರತಿ ಎಕರೆಗೆ ರೂ.2,00,000/ ದಿಂದ 3,00,000/- ಕೊಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ತೀರಿಕೊಂಡ ನಂತರ ನನ್ನ ತಾಯಿಯೇ ನನ್ನ ಹಾಗೂ ನನ್ನ ತಮ್ಮಂದಿರ ಓದಿನ ಖರ್ಚನ್ನು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಮೊದಲು ದಾವೆಯನ್ನು ಸಲ್ಲಿಸಿದಾಗ ನ್ಯಾಯಾಲಯಕ್ಕೆ ನಾನು, ನನ್ನ ತಾಯಿ ಹಾಗೂ ನನ್ನ ತಮ್ಮಂದಿರು ಬರುತ್ತಿದ್ದೇವು ಎಂದರೆ ಸರಿಯಲ್ಲ. ನನ್ನ ತಾಯಿಯು ಬಸವಂತಪೂರ ಗ್ರಾಮದಲ್ಲಿ ವಾಸ ಮಾಡುತ್ತಾರೆ.

5. ಸದರಿ ಹೊಲದ ಲೀಜಿನಿಂದ ಬಂತಹ ಹಣದಿಂದ ನಾವು ಉಪಜೀವನವನ್ನು ಮಾಡುತ್ತಿದ್ದೇವೆ. ಈಗ ನಮ್ಮ ಹೊಲದ ಲೀಜಿಗಾದಂತೆ

ರೂ.1,50,000/- ಗಳನ್ನು ಕೊಡುತ್ತಾರೆ. ಒಣಬೇಸಾಯ ಹಾಗೂ ನೀರಾವರಿ ಜಮೀನುಗಳಿಗೆ ಲೀಜ್ ಹಣ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿ. ಒಣಬೇಸಾಯ ಜಮೀನಿಗೆ ಪ್ರತಿ ಎಕರೆಗೆ ರೂ.5,000/- ಲೀಜಿಗಾಗಿ ಕೊಡಲಾಗುತ್ತಿದೆ ಎಂದರೆ ಸರಿಯಲ್ಲ. ನಮ್ಮ ಸದರಿ ಜಮೀನಿಗೆ ಪ್ರತಿ ವರ್ಷ ಲೀಜ್ ಹಣ ಎಂದು ರೂ.30,000/- ಬರುತ್ತದೆ ಎಂದರೆ ಸರಿಯಲ್ಲ.

**ಸಾಕ್ಷಿಯ ಮುಂದುವರೆದ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.